(198) ಡಾ॥ ಬಗಲಿ ಸರ್ವಭೌಮ ಸಶಗೌಡ (ಇಂಡಿ) :– ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ವಿಧಾನ ಸಭೆಯ ಮೊಗಸಾಲೆಯ ಆಸ್ಪತ್ರೆಯಲ್ಲಿ ಕಳಪೆ ದರ್ಜೆಯ ಒಮಿಪ್ರಜಾಲ್ ಎಂಡೋಲ್ಯಾಬ್ಸ್ ಔಷಧ ಸರಬರಾಜು ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಆ) ಸರ್ಕಾರಿ ಔಷಧಿ ಮಳಿಗೆಯ ಅಪರ ನಿರ್ದೇಶಕರ ಹುದ್ದೆಗೆ ವೈದ್ಯಕೀಯ ಪದವೀಧರರನ್ನು ಕಡೆಗಣಿಸಿ ಕೆ.ಎ.ಎಸ್. ಅಧಿಕಾರಿಯನ್ನು ನೇಮಿಸಿರುವುದು ಇಂತಹ ಅನಾಹುತಗಳಿಗೆ ಕಾರಣವೆಂದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಇ) ಸರ್ಕಾರಿ ಔಷಧಿ ಮಳಿಗೆಗೆ ಎಂಡೋಲ್ಯಾಬ್ಸ್ ಔಷಧಿ ತಯಾರಕರಿಂದ ಯಾವ ಯಾವ ಔಷಧಿಗಳನ್ನು ಎಷ್ಟು ಮೊತ್ತದಲ್ಲಿ ಖರೀದಿಸಲಾಯಿತು ಎಂಬ ಮಾಹಿತಿಯನ್ನು ಒದಗಿಸುವುದು ;

ಈ) ಅಪರ ನಿರ್ದೇಶಕರು ಸರ್ಕಾರಿ ಔಷಧಿ ಮಳಿಗೆ ಇವರು ಈ ಮಾಹಿತಿ ವಿವರ ನೀಡುವುದು ;

ಉ) ಸರ್ಕಾರಿ ಔಷಧಿ ಮಳಿಗೆಯ ಅಪರ ನಿರ್ದೇಶಕರ ಹುದ್ದೆಗೆ ವೈದ್ಯಕೀಯ ಪದವೀಧರರನ್ನು ನೇಮಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ ?

ಶ್ರೀ ಬಿ. ಶ್ರೀರಾಮುಲು (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):–

ಅ) ಔಷಧ ಪರಿವೀಕ್ಷಕರು, ಬೆಂಗಳೂರು ವೃತ್ತ–1, ಇವರು ದಿನಾಂಕ : 06–06–2008ರಂದು ಎಂಡೋಲ್ಯಾಬ್ಸ್ ಲಿ., ರವರು ಉತ್ಪಾದಿಸಿದ ಒಮಿಪ್ರಜಾಲ್ ಕ್ಯಾಪ್ಸ್ಯೂಲ್ ಐ.ಪಿ. 20 ಎಂ.ಜಿ. ಔಷಧ ಬ್ಯಾಚ್ ನಂ. 3207, ಉತ್ಪಾದಿಸಿದ ದಿನಾಂಕ : 11/07, ಮುಕ್ತಾಯವಾಗುವ ದಿನಾಂಕ : 10/09. ಇದನ್ನು ವಿಶ್ಲೇಷಣೆ ಸಲುವಾಗಿ ಪಡೆದಿದ್ದರು. ಸರ್ಕಾರಿ ವಿಶ್ಲೇಷಕರು, ಕರ್ನಾಟಕ ಇವರು ತಮ್ಮ ವರದಿಯ ದಿನಾಂಕ : 09–06–2008ರಲ್ಲಿ ಸದರಿ ಔಷಧಿಯ ಗುಣಮಟ್ಟ ಉತ್ತಮವೆಂದು ಘೋಷಿಸಿದರು.

ಆ) ಮೇಲಿನ ಉತ್ತರದಿಂದ ಇದು ಉದ್ಭವಿಸುವುದಿಲ್ಲ.

ಇ) 2007–08ನೇ ಸಾಲಿನಲ್ಲಿ ಎಂಡೋ ಲ್ಯಾಬ್ಸ್ ಇವರಿಂದ ಖರೀದಿಸಿದ ಔಷಧಿ ಮತ್ತು ಮೊತ್ತ ಈ ಕೆಳಕಂಡಂತಿದೆ.

sl	Drug Name	Amount in Rs
1	ERYTHROMYCIN SYRUP: 125MG/5ML IX 10 BOTTELS	19,11,168/-
2	ALBENDAZOLE SUSPENSION: 400 MG/ 10NK IX10X10ML	9,90,207/-
3	OMEPRAZOLE CAP 20 MG CAP 1X10X10	86,78,026/-
4	TAMOXIFEN CITRATE TABLET (#) 20MG 1X10X10	1,408/-
5	TAMOXIFEN CITRATE TABLET (#) 40MG 1X10X10	77/-
6	ZINK OXIDE 32% W/V {IN A SUITABLE WATER IN OIL EMULSIFIED BASE} CREAM AL. TUBE: 32% W/V 1X15GM	86,241/-
7	POVIDONE IODINE OINTMENT 5% W/W 1X125GM	24,63,939/-
8	VITAMIN 'B' COMPLEX TAB.	77,01,117/-
9	SULPHADOXIN PYRIMETHAMINE TAB.	12,620
	TOTAL	2,18,44,803

ಈ) ಮೇಲಿನಂತೆ (ಇ)ರಲ್ಲಿ ಮಾಹಿತಿ ಹಾಗೂ ವಿವರ ನೀಡಲಾಗಿದೆ.

ಉ) ಅಂತಹ ಪ್ರಸ್ತಾವನೆ ಸರ್ಕಾರದ ಮುಂದೆ ಇಲ್ಲ.

(199) **ಡಾ॥ ಬಗಲಿ ಸರ್ವಭೌಮ ಸಶಗೌಡ** (ಇಂಡಿ) :- ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:-

ಅ) ಭ್ರಷ್ಟಾಚಾರದ ಪ್ರಕರಣವೊಂದರ ಬಗ್ಗೆ ಆರೋಗ್ಯ ಇಲಾಖೆಯ ಪ್ರಧಾನ ಕಾರ್ಯದರ್ಶಿಯವರನ್ನು ಮಾಹಿತಿಗಾಗಿ ಸಂಪರ್ಕಿಸಿದಾಗ ಸದರಿ ಮಾಹಿತಿ ಅವಶ್ಯವಿದ್ದಲ್ಲಿ ಮಾಹಿತಿ ಹಕ್ಕು ಅಧಿನಿಯಮದಡಿಯಲ್ಲಿ ಅರ್ಜಿ ಸಲ್ಲಿಸಿದರೆ ಇದನ್ನು ವಿಚಾರಿಸುತ್ತೇನೆಂದು ಉದಾಸೀನತೆಯ ಉತ್ತರವನ್ನು ನೀಡಿರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ

ಆ) ಶಾಸಕರಿಗೆ ಸರ್ಕಾರದಿಂದ ಯಾವುದೇ ಮಾಹಿತಿ ಅಗತ್ಯವಿದ್ದಲ್ಲಿ ಮಾಹಿತಿ ಹಕ್ಕು ಅಧಿನಿಯಮದಡಿಯಲ್ಲಿ ಮಾತ್ರ ಅರ್ಜಿ ಸಲ್ಲಿಸಬೇಕೆ ;

ಇ) ಮಾಹಿತಿ ಹಕ್ಕು ಅಧಿನಿಯಮ ಜಾರಿಗೆ ಬರುವ ಮುನ್ನ ಅವಶ್ಯವಿರುವ ಮಾಹಿತಿಯನ್ನು ಸರ್ಕಾರದಿಂದ ಯಾವ ಕಾನೂನಿನಡಿಯಲ್ಲಿ ಪಡೆಯಲಾಗುತ್ತಿತ್ತು?